ನಿಂತಿರ್ತಾರ. ನಾವಿಬ್ಬರೂ ಬಸ್ಸಿನ್ಯಾಗ ಬರಲಿಲ್ಲ ಅಂದ್ರ ಘಾಬರಿ ಆಗ್ತಾರ. ಹೆಂಗರ ಮಾಡಿ ದೇವ್ರ ಮ್ಯಾಲೆ ಭಾರಾ ಹಾಕಿ ಬಳ್ಳಾರಿ ಮುಟ್ಟಕೊಳ್ಳೋನು ಅಂದ್ರ ಧೈರ್ಯ ಸಾಲವಲ್ತು. ಆಯಿ ಹೇಳಿಧಾಂಗ ನೀ ಖರೇನ ಜಪ್ಪೋ ಇಟಕೊಂಡಿದ್ರ ಅಲ್ಲಿ ಹೋದ್ರೂ ನಿನ್ನ ಜ್ವರ ಕಡಿಮಿ ಆಗ್ತಾವೋ ಇಲ್ಲೋ ಗೊತ್ತಿಲ್ಲ. ವಿಚಾರ ಮಾಡಿ, ಮಾಡಿ ತಲಿ ಕೆಟ್ಟ ಧಾಣ ಆತು. ಅಷ್ಟರಾಗ ನರಗುಂದ ದಾಟಿತು. ಆಮ್ಯಾಲೆ ಆದದ್ದಾತು ನೋಡೋಣು ಅಂತ ಕಂಡಕ್ಟರನ್ನ ಕೇಳಿದೆ. 'ಕೂಸಿಗೆ ಭಾಳ ಜ್ವರಾ ಬಂದಾವು. ನಾವು ಮುಂದಿನ ಊರಾಗ ಇಳ್ಕೋತೀವಿ. ಅಲ್ಲೀತನಕದ ಚಾರ್ಜ್ ತಗೊಂಡು ಉಳದಿದ್ದ ರೊಕ್ಕಾ ವಾಪಾಸ್ ಕೊಡ್ತೇರಿ? ನಮಗ ವಾಪಸ್ ಗೋಕಾಕ್ ಫಾಲ್ಸಿಗೆ ಹೋಗಬೇಕು'.

ಪಾಪ, ಅಂವಾ ಆದ್ರೂ ಹ್ಯಾಂಗ ಕೊಟ್ಟಾನು? ಅವನ ಮುಂದಿನ ಸೀಟಿನಾಗೆ ಕುತ್ತಿದ್ರಿಂದ ಅವನಿಗೂ ಎಲ್ಲಾ ಕಥಿ ಗೊತ್ತಿತ್ತು.

'ಒಮ್ಮೆ ಟಿಕೀಟ್ ಹರದ್ರ ಹಂಗ ರೊಕ್ಕಾ ಕೊಡಾಕ ಬರೂದಿಲ್ರಿ ಅಕ್ಕಾರ. ಒಂದ ಕೆಲಸಾ ಮಾಡಬೌದು. ಮುಂದಿನ ಸ್ಟಾಪಿನಾಗ ಯಾರರ ಬಳ್ಳಾರಿ ತನಾ ಹೋಗಾವ್ರ ಹತ್ತಿದ್ರ ನಿಮ್ಮ ಟಿಕೀಟ್ ಇಸ್ಕೊಂಡು ಅವ್ರಿಗೆ ಕೊಡಬೌದು. ಪಾಪ ನೀವ ಭಾಳ ತ್ರಾಸದಾಗ ಅದೇರಿ, ನೋಡೂಣು' ಅಂತಂದ.

ಮುಂದ ನವಲಗುಂದ ಬಂತು. ಇಬ್ಬರು ಹತ್ತಿದರು. ಹತ್ತೂ ಮುಂದ ಕಂಡಕ್ಟರ್ 'ಯಾವ ಊರಿಗೆ ಹೋಗ್ತೇರಿ?' ಅಂತ ಕೇಳಿದ. ಅವ್ರು ಇಬ್ರೂ ಗದಗ ಅಂತ ಹೇಳಿದ್ರು. ಅಣ್ಣಿಗೇರಿದಾಗೂ ಬಳ್ಳಾರಿಗೆ ಹೋಗಾವ್ರು ಯಾರೂ ಹತ್ತಲಿಲ್ಲ. ಅವಾಗ ಕಂಡಕ್ಟರ್ ನನ್ನ ನೋಡಿದ. ನನಗಂತೂ ಭಾಳ ಬೇಜಾರಾತು. ಆದ್ರ, ನನಗಿಂತಾ ಹೆಚ್ಚು ಪಾಪ ಕಂಡಕ್ಟರಿಗೆ ಬೇಜಾರಾಗಿತ್ತು.

ಕಳೆದ ವಾರದ 'ಚೆನ್ನುಡಿ'
'ನಮ್ಮೂರ ಆಷಾಢದಮ್ಮನ ಹಬ್ಬ' ಕೇಳಿ
**ಶಾಂತಾ ಜಯಾನಂದ** ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.



ಮುಂದಿನ ಸ್ಟಾಪು ಗದಗ. ಅಲ್ಲಿ ಬಸ್ಸು ಊಟಕ್ಕಂತ ಭಾಳ ಹೊತ್ತು ನಿಲ್ಲಸ್ತಿತ್ತು. ಊಟಕ್ಕಂತ ಹೋಗಾವ್ರೆಲ್ಲಾ ಕೆಳಗ ಇಳದ ಹೋದ್ರೂ, ಕಂಡಕ್ಟರ್ ಅಲ್ಲೇ ನಿಂತ. ಅಷ್ಟರಾಗ ಒಬ್ಬಾವ ಬಳ್ಳಾರಿಗೆ ಹೋಗಬೇಕು ಅಂತಾ ಬಸ್ ಹತ್ತಿದ. ಕಂಡಕ್ಟರ್ ಭಡಕ್ಕನ ನನ್ನ ಟಿಕೀಟು ಇಸಕೊಂಡು, ಅವ್ನಿಗೆ ಕೊಟ್ಟ. ಗದಗ ತನಕದ್ದ ರೊಕ್ಕಾ ಮುರಕೊಂಡು, ಉಳದಿದ್ದು ವಾಪಸ್ ಕೊಟ್ಟ. ನಿನಗ ತಗಸಿದ್ದ ಅರ್ಧ ಟಿಕೀಟು ವೇಸ್ಟು ಆತು. 'ಅಕ್ಕಾರ ನನ್ನ ಕಡಿಂದ ಇಷ್ಟs ಮಾಡಾಕ ಆಗತೈತ್ರಿ. ನಾ ಅಣ್ಣಾರಿಗೆ ಬಳ್ಳಾರ್ಯಾಗ ಎಲ್ಲಾ ಹೇಳತೇನ್ರೀ. ನೀವೇನೂ ಕಾಳಜಿ ಮಾಡಬ್ಯಾಡ್ರಿ' ಅಂತಾ ಹೇಳಿ ಪಾಪ ಊಟಕ್ಕೆ ಹೊರಟುಹೋದ.

ನಿನ್ನನ್ನ, ಲಗೇಜನ್ನೂ ಇಳಿಸ್ಕೊಂಡು ಬಸ್ ಸ್ಟ್ಯಾಂಡಿನಾಗ ನಿಂತೆ. ಒಂದೈದು ನಿಮಿಷದಾಗ 'ಹೊಸಪೇಟೆ ಸಂಕೇಶ್ವರ' ಬಸ್ಸು ಬಂತು. ಅದಂತೂ ಭಯಂಕರ ರಶ್ ಇತ್ತು. ಹೆಂಗೋ ಮಾಡಿ, ಅದರಾಗ ಹತ್ತಿ ಗೋಕಾಕ ತನಾ ದೀಡ್ ಟಿಕೀಟು ತಗಸಿದೆ. ಲಗೇಜೆಲ್ಲಾ ಒಂದ್ಕಡೆ ಇಟ್ಟು, ನಿನ್ನ ಬಗಲಾಗ ಕೂಡಿಸ್ಕೊಂಡು ನಿಂತೆ. ಅಷ್ಟರಾಗ ಯಾರೋ ಸೀಟು ಬಿಟ್ಟುಕೊಟ್ಟು ನನಗ ಕೂಡಲಿಕ್ಕೆ ಜಾಗಾ ಕೊಟ್ರು. ಮುಂದಿನ ಎರಡು ಸ್ಟಾಪ್ ದಾಟಿದ ಮ್ಯಾಲೆ ಬಾಜೂಕಿನ ಸೀಟೂ ಖಾಲಿ ಆತು. ಅಲ್ಲಿ ನಿನ್ನ ಕೂಡಿಸಿ, ಉಸ್ಸಪ್ಪಾ ಅಂತ ಸ್ವಲ್ಪ ಉಸಿರ ತಗೊಂಡೆ.

ಕರ್ನಾಟಕದ ವಿವಿಧ
ಜಿಲ್ಲೆಗಳ ನುಡಿಸೊಬಗನ್ನು
ಪರಿಚಯಿಸುತ್ತಿರುವ 'ಚೆನ್ನುಡಿ'
ಅಂಕಣಕ್ಕೆ ನೀವೂ ಬರೆಯಬಹುದು.
ನಿಮ್ಮೂರಿನ ಭಾಷೆಯ ಸೊಗಡನ್ನು
ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ
1000 ಪದಮಿತಿಯಲ್ಲಿ, ನುಡಿ ಅಥವಾ
ಯುನಿಕೋಡ್‌ನಲ್ಲಿರಲಿ.
ಇಮೇಲ್–
editorsu@sudha.co.in

ಅಷ್ಟರಾಗ ನಿನಗೂ ಭಾಳ ದಣಿಕಿ ಆಗಿತ್ತು ಅನಸ್ತದ. ಸೀಟಿನ ಮ್ಯಾಲೆ ಕುತ್ತ ಕೂಡಲೇ ಮಲಕೊಂಡ ಬಿಟ್ಟಿ. ಆದಷ್ಟ ಜಲ್ದಿ ಮನಿ ಮುಟ್ಟಿದ್ರ ಸಾಕಪಾ ಅಂತ ನನಗ ಚಡಪಡಿಕೆ ಚಾಲೂ ಆಗಿತ್ತು. ಬರೂಮುಂದಿನಕಿಂತ, ಹೋಗೂಮುಂದ ಬಸ್ಸು ಭಾಳ ಟೈಮ್ ತಗೊಳ್ಳಿಕತ್ತದ ಅಂತ ಅನಸ್ತಿತ್ತು ನನಗ. ನಿದ್ದಿ, ನೀರಡಕಿ, ಹಸಿವಿ ಎಲ್ಲಾ ಹಾರಿ ಹೋಗಿತ್ತು. ಎರಡೆರಡ ನಿಮಿಷಕ್ಕೊಮ್ಮಿ ನಿನ್ನ ಮೈ ಮುಟ್ಟಿ ನೋಡತಿದ್ದೆ ಜ್ವರಾ ಕಡಿಮಿ ಆಗ್ಯಾವೇನು ಅಂತ. ಸ್ವಲ್ಪ ಕಡಿಮಿ ಆಗಿದ್ದುವು. ಆದ್ರೂ, ಇನ್ನೂ ರಗಡ ಬಿಸಿ ಇತ್ತು ಮೈ. ನಿದ್ಯಾಗನs ಎಬ್ಬಿಸಿ, ಇನ್ನೊಂದು ಬೂಚು ಕಾಲ್ಪಾಲ್ ಹಾಕಿದೆ. ಹೆಚ್ಚು ಕಡಿಮಿ ನಾಲ್ಕಕ್ಕ ಗೋಕಾಕ ಬಂತು. ಅಲ್ಲಿಂದ ಇಳಿದು, ಫಾಲ್ಸ್ ಬಸ್ಸು ಹತ್ತಿ ಫಾಲ್ಸಿಗೆ ಟಿಕೀಟು ತಗಸ್ಲಿಕ್ಕೆ ರೊಕ್ಕಾ ತಗದಾಗ ಗೊತ್ತಾತು ಕಂಡಕ್ಟರ್ ಇಪ್ಪತ್ತು ರೂಪಾಯಿ ಹೆಚ್ಚು ಕೊಟ್ಟಿದ್ದ. 'ನನ್ನ ಕಡಿಂದ ಇಷ್ಟs ಮಾಡಾಕ ಆಗತೈತ್ರಿ' ಅಂದದ್ದರ ಅರ್ಥ ನನಗ ಈಗ ಗೊತ್ತಾತು. ಪಾಪ, ಗದ್ದಲದಾಗ ಅವಂಗ ಧನ್ಯವಾದ ಹೇಳಲಿಕ್ಕೂ ಆಗಲಿಲ್ಲ ಅಂತಾ ಪಿಚ್ ಅನಿಸಿತು. ಅದಾದ ಮ್ಯಾಲೆ ಸಾಕಷ್ಟ ಸಲಾ ಆ ಬಸ್ಸಿಗೆ ಬಂದೇನಿ. ನನಗ ಆ ಮುದಕನೂ ಸಿಕ್ಕಿಲ್ಲ, ಆ ಕಂಡಕ್ಟರ್‌ನೂ ಕಾಣಿಸಿಲ್ಲ.

ಹೆಂಗೋ ಮಾಡಿ, ಫಾಲ್ಸು ತಲುಪಿ, ಮನಿಗೆ ಹೋದ್ರ ಮನಿ ಮಂದಿಗೆಲ್ಲಾ ಆಶ್ಚರ್ಯ, ಘಾಬರಿ! ನೀ ಅಂತೂ ಓಡಿ ಹೋಗಿ ಅವ್ವಾನ್ನ ಅಪಕೊಂಡ ಬಿಟ್ಟಿ. ನಿನಗೇನೊ ಭಯಂಕರ ಖುಷಿ ಆಗಿ ಬಿಟ್ಟಿತ್ತು. ನನಗಂತೂ ಕಣ್ಣಾಗ ನೀರ ಬಂದ ಬಿಟ್ಟುವು. ಅವತ್ತ ರವಿವಾರ ಆಗಿದ್ರಿಂದ ದಾದಾನೂ ಮನ್ಯಾಗ ಇದ್ರು. ನನ್ನ ಕೂಡಿಸಿ, ಸಮಾಧಾನ ಮಾಡಿದ್ರು. ಆಮ್ಯಾಲೆ ಎಲ್ಲಾ ಕಥಿ ಹೇಳಿದೆ. 'ಹೌದು? ಅಷ್ಟ ಜ್ವರಾ ಇದ್ದುವು?' ಅಂತ ದಾದಾ ನಿನ್ನ ಕರದ ಮೈ ಮುಟ್ಟಿ ನೋಡ್ತಾರ ಎಲ್ಲಿ ಅವ ಜ್ವರಾ? ಮೈ ಒಂದ ಸ್ವಲ್ಪ ಸೈತ ಬಿಸಿ ಇಲ್ಲ. 'ಹೋಗೋ ಬೋಕಾಣ್ಯಾ, ನಿಮ್ಮವ್ವನ್ನ ಅಂಜಿಸಿ ಬಿಟ್ಟಲ್ಲೋ. ಅವ್ರಪ್ಪಗೂ ಹೆದರದಾಕಿ ಮಗ್ಗ ಹೆಂಗ ಹೆದರಿದ್ಲು ನೋಡು' ಅಂತಂದ್ರು. ಎಲ್ಲಾರೂ ಗೊಳ್ ಅಂತ ನಕ್ಕರು. ನಂಗೂ ನಗು ಬಂತು.

ಅಂತೂ ನಂಗ ನಿರಾಳ ಆತು. ಅವ್ವಾ, 'ಏನೂ ತಿಂದಿಲ್ಲ ಪಾಪ, ಊಟಾ ಮಾಡ ನಡೀರಿ' ಅಂತ ಎಬಿಸಿದ್ಲು. ನಾನು ಕಟ್ಟಿಕೊಂಡು ಹೋಗಿದ್ದ ಊಟದ ಡಬ್ಬೀನ್ನ ಚೀಲದಾಗಿಂದ ತಗದ ತಾಟನಾಗ ಹಾಕಲಿಕ್ಕೆ ಚಾಲು ಮಾಡಿದೆ. ಅಷ್ಟರಾಗ ನೀನು, 'ನನಗ ಊಟಾ ಬ್ಯಾಡಾ. ರವಾ ಉಂಡಿ ಬೇಕು' ಅಂತ ಅವ್ವಾನ ಕಡೇ ಓಡಿದಿ. ನಿನಗ ಪಕ್ಕಾ ಆರಾಮ ಆಗ್ಯದ ಅನ್ನೋದು ಗೊತ್ತಾತು.

ಅದಾದ ಮ್ಯಾಲೆ ನೀನು ಅಲ್ಲೇ ಉಳಿದುಬಿಟ್ಟಿ. ಸಾಲಿ ಮುಗಿಸಿ, ಧಾರಾವಾಡದಾಗ ಕಾಲೇಜಿಗೆ ಹೋದಿ; ಆಮ್ಯಾಲೆ ನಿನ್ನ ಮದಿವಿ ಆತು. ನಾವಲ್ಲಿ ನಿನ್ನ ಬಿಟ್ಟಿರಲಿಲ್ಲ ಅಂದ್ರ ನೀನೂ ಅವತ್ತ ಭೋಲೋ ನೌಕರ್ಯಾಗ ಇರ್ತಿರಲಿಲ್ಲ. ಆದ್ರ, ನಿನ್ನ ಬಾಲ್ಯ ನಾವಿಬ್ಬರೂ ಛಂದಂಗೆ ನೋಡಲೇ ಇಲ್ಲ ಅನ್ನೂ ಕೊರಗು ಕಡೀ ತನಕಾ ಉಳಕೊಂಡಿತು' ಅಂತಂದು ಕಣ್ಣಾಗ ನೀರು ತಂದ್ಕೋತಿದ್ಲು. ■



ಸವದತ್ತಿಯ
ರೇಣುಕಾ ಯಲ್ಲಮ್ಮ
ದೇವಸ್ಥಾನ